◆ **ಭಾರತೀಯ ಕಲೆಯನ್ನು ಥಿಯರೈಸ್ ಮಾಡಲು ಆಗುವುದಿಲ್ಲವೇ? ತಾತ್ವಿಕ ಚೌಕಟ್ಟು ಕಲ್ಪಿಸುವುದು ಅಸಾಧ್ಯವೇ?**

ಏಕೆ ಆಗುವುದಿಲ್ಲ? ಈಗಾಗಲೇ ದೃಶ್ಯಕಲೆಯ ಉನ್ನತ ಹಂತಗಳ ಕಲಿಕಾಪಠ್ಯಗಳಲ್ಲಿ, ಅಕಡೆಮಿಕ್ ಆಗಿ ತಾತ್ವಿಕತೆಯನ್ನು ಕುರಿತ ಅಧ್ಯಾಯಗಳು ಇವೆ. 'ರಸ'–'ಭಾವ' ಪ್ರಧಾನ ತಾತ್ವಿಕತೆಯು ದೈವೀಕ ದೃಶ್ಯ ತಾತ್ವಿಕತೆಯ ನೋಟ ನೀಡುವಂತಹ ಅಧ್ಯಾಯಗಳು. ಭರತ, ವಾತ್ಸಾಯನನ ಕಾಮಸೂತ್ರದಲ್ಲಿ ದೃಶ್ಯಕಲೆಯನ್ನು ಉಲ್ಲೇಖಿಸಿ ಸೂಚಿಸಲಾಗಿರುವ ಷಡಂಗಗಳು ಇತ್ಯಾದಿಗಳೂ ಇವೆ. ಸಾಹಿತ್ಯ ಮೀಮಾಂಸೆಯ ಅಲಂಕಾರ, ಔಚಿತ್ಯ, ಧ್ವನಿ, ರೀತಿ ಲಕ್ಷಣಗಳನ್ನೂ ಪರಿಶೀಲಿಸಲಾಗಿದೆ.

ಆದರೀಗ ವೈವಿಧ್ಯ–ವೈರುಧ್ಯತೆಯ ಸಂದರ್ಭ. ಕಲಿಕೆಯ ಬಿಗಿಯೇ ಬೇರೆ – ಕಲಾಸೃಷ್ಟಿಯೇ ಬೇರೆ. ಸ್ವಚ್ಛಂದ ಛಂದಸ್ಸಿನ ಕಾವ್ಯ ಸದೃಶ ದೃಶ್ಯಕಲಾ ಅಭಿವ್ಯಕ್ತಿಯನ್ನೇ ಇಂದಿನವರು ಇಷ್ಟಪಡುತ್ತಾರೆ. ಆದರೆ ದೃಶ್ಯಕಲೆಯ ತಾತ್ವಿಕತೆಯ ಜತೆಜತೆಗೇ ಕಲಾವ್ಯಾಕರಣವೂ ಗೊತ್ತಿದ್ದರೆ ಉತ್ತಮ. ನಂತರವಷ್ಟೇ ಅದನ್ನು ನಿರಚಿಸಿ ಸೃಷ್ಟಿಸುವ ಪ್ರಕ್ರಿಯೆ.

◆ **ಜಗತ್ತು ಬೈನರಿಗಳಲ್ಲಿ ವಿಭಜನೆಯಾದ ಹಾಗೆ ದೃಶ್ಯಕಲಾ ಜಗತ್ತು ಕೂಡ ತನ್ನನ್ನು ಸೀಳಿಕೊಂಡಿದೆ. ಇದು ಹಿಂದೆ ಇರಲಿಲ್ಲವೇ? ನಾಳೆಯೂ ಮುಂದುವರೆಯುತ್ತದೆಯೇ?**

ನಾವೆಲ್ಲರೂ ಇಂದು ಈ ವಿಭಜನೆಯ ಅಗ್ನಿಕುಂಡದಲ್ಲಿ ಇದ್ದೇವೆ. ಡೆರಿಡಾ ಗಣನೀಯ ರೀತಿಯಲ್ಲಿ ಬೈನರಿ ವಿಭಜನೆಯನ್ನು ವಿವೇಚಿಸಿದ್ದಾನೆ. ಶತಮಾನಗಳ ಹಿಂದೆ ಬೂದಿ ಮುಚ್ಚಿದ ಕೆಂಡದಂತಿದ್ದ ಈ ನಡೆಗಳು ಇಂದು ಎಲ್ಲರಿಗೂ ಗೊತ್ತಾಗುವಂತೆ ನಡೆಯುತ್ತಿವೆ. (ಹಾಗೆ ನೋಡಿದರೆ ಭಾರತೀಯ ಕಲೆಯ ಸೃಷ್ಟಿಕಾರರು ಮೂಲತಃ ಊರ ಹೊರಗೆ ಇರುವವರು, ಶೂದ್ರರೇ ಆಗಿರುತ್ತಿದ್ದರು; ಇರಲಿ) ನಮ್ಮ ಸಂದರ್ಭದಲ್ಲಿಯೂ ಮಠ, ದೇವಾಲಯ, ಧಾರ್ಮಿಕ ಸಂಸ್ಥೆಗಳು, ಗ್ಯಾಲರಿಗಳು ಸರ್ಕಾರಗಳೂ ಮತ್ತೊಂದು ವರ್ಗದ ಮೇಲೆ ದಬ್ಬಾಳಿಕೆ ಮಾಡುತ್ತವೆ.

ಎಂ.ಎಫ್. ಹುಸೇನರ ಬಗ್ಗೆ 'ಇತರರು', ಇತರರ ಬಗ್ಗೆ ಎಂ.ಎಫ್. ಹುಸೇನ್‌ರು ನಡೆದುಕೊಂಡ ರೀತಿಯ ಒಡಲಾಳದಲ್ಲಿಯೂ ಈ ಬೈನರಿ ವಿಭಜನೆಯ ಕೆಂಡ ಇದ್ದಿತು! ಅಭಿವ್ಯಕ್ತಿಯ ಮಾಂತ್ರಿಕ ಕೌತುಕವೇ ವಿಭಿನ್ನತೆ, ಅನೇಕತೆ; ನಾವೂ ಅವರು, ಇತರರೂ ಎಲ್ಲರೂ. ಕಲೆಯ ಅನನ್ಯತೆಯ ಒಳಸತ್ವವೇ ಇದು. ಸಾವಿರಾರು ಕಲಾವಿದರು 'ಸೂರ್ಯಕಾಂತಿ' ಹೂವನ್ನು ಚಿತ್ರಿಸಿದರೆ, ವಸ್ತು ಎಲ್ಲದರಲ್ಲಿಯೂ ಒಂದೇ ಆದರೆ ಅದು ಅಭಿವ್ಯಕ್ತಿಗೊಂಡ ಕ್ರಮವು ಸಾವಿರಾರೇ ಆಗಿರುತ್ತದೆ. ನಿಜವಾದ ಕಲಾಸೃಷ್ಟಿಯ ಜೀವದ್ವನಿ ಎಂದರೆ ಇದೇ ಆಗಿದೆ. ಆದರೆ ಮನುಷ್ಯನ ಮಾನವೀಯ ಮುಖದ ಹಿಂದೆ ಇರುವ ಕ್ರೌರ್ಯದ ಆಧಿಪತ್ಯ ಹಿಂದಿನಂತೆ, ಇಂದಿನಂತೆ ನಾಳೆಗಳಲ್ಲಿಯೂ ಮುಂದುವರೆಯುತ್ತದೆ.


**ದೇವು ಪತ್ತಾರ**

ಪತ್ರಕರ್ತ, ಲೇಖಕ ದೇವು ಪತ್ತಾರ ಯಾದಗಿರಿ ಜಿಲ್ಲೆ ಶಹಪುರದವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು ಲಿಂಗ್ವಿಸ್ಟಿಕ್ಸ್ ಹಾಗೂ ಟ್ರಾನ್ಸಲೇಷನ್‌ನಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಅವರ ಪ್ರಮುಖ ಕೃತಿಗಳೆಂದರೆ, 'ಕ್ಯಾಮರಾ ಎಂಜಿನಿಯರ್ ಗುಲಾಂ ಮುಂತಕಾ', 'ಮಹಾದೇವ ಬಾಬಾ ಮೆಡೋಸ್ ಟೇಲರ್' (ಸಂಪಾದಿತ), 'ಈಗ ಹೀಗಿರುವ ಲೋಕದಲ್ಲಿ' (ವ್ಯಕ್ತಿಚಿತ್ರ), 'ಬಹಮನಿ ಸಾಮ್ರಾಜ್ಯ'.